**ಕರ್ನಾಟಕ ಸರ್ಕಾರ**
**(ಸಹಕಾರ ಇಲಾಖೆ)**
**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52**

**ಸಂಖ್ಯೆ:ಆರ್‌ಸಿಎಸ್/ಸಿಆರ್‌ಡಿ/ 1 /2013-14** **ದಿನಾಂಕ:28-08-2014**

**'ಸುತ್ತೋಲೆ'**

**ವಿಷಯ :-** 2013-14 ನೇ ಸಾಲಿನಲ್ಲಿ ಶೂನ್ಯ ಮತ್ತು ಶೇ.1 ರ ಬಡ್ಡಿ ದರದಲ್ಲಿ ಸಹಕಾರ ಸಂಸ್ಥೆಗಳು ರೈತರಿಗೆ ವಿತರಿಸಿದ ಅಲ್ಪಾವಧಿ ಕೃಷಿ ಸಾಲಗಳ ವಸೂಲಾತಿ ಆಧಾರದ ಮೇಲೆ ಬಡ್ಡಿ ಸಹಾಯಧನದ ಕ್ಲೇಮು ಬಿಲ್ಲುಗಳನ್ನು ಸಲ್ಲಿಸುವ ಬಗ್ಗೆ

ಉಲ್ಲೇಖ:- 1. ಸರ್ಕಾರದ ಆದೇಶ ಸಂಖ್ಯೆ: ಸಿಒ 87 ಸಿಎಲ್‌ಎಸ್ 2013, ಬೆಂಗಳೂರು, ದಿನಾಂಕ:28.08.2013
2. ಸರ್ಕಾರದ ಆದೇಶ ಸಂಖ್ಯೆ ಸಿಒ 172 ಸಿಎಲ್‌ಎಸ್ 2012 ದಿ.19-08-2014

=====

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಉಲ್ಲೇಖ 1 ರ ಸರ್ಕಾರದ ಆದೇಶದಂತೆ 2013-14 ಸಾಲಿನಲ್ಲಿ ಶೂನ್ಯ ಮತ್ತು 1 ರ ಬಡ್ಡಿ ದರದಲ್ಲಿ ಸಹಕಾರ ಸಂಸ್ಥೆಗಳು ರೈತರಿಗೆ ವಿತರಿಸಿದ ಅಲ್ಪಾವಧಿ ಕೃಷಿ ಸಾಲಗಳ ಮೇಲೆ ಉಲ್ಲೇಖ 2 ರಲ್ಲಿ ಶೂನ್ಯ ಬಡ್ಡಿ ದರದಲ್ಲಿ ವಿತರಿಸಿದ ಸಾಲಗಳಿಗೆ ಶೇ.10.00 ರ ಬಡ್ಡಿ ಸಹಾಯಧನವನ್ನು ನಿಗದಿಪಡಿಸಿ ಇದರಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಶೇ.7.50 ಬಡ್ಡಿ ಸಹಾಯಧನ ಮತ್ತು ಮಾರ್ಜಿನ್(ಧನ ಸಹಾಯಧನ ಒಳಗೊಂಡಂತೆ) ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಶೇ.2.50 ಮಾರ್ಜಿನ್ ನ್ನು ಹಂಚಿಕೆ ಮಾಡಲಾಗಿದೆ.

ಉಲ್ಲೇಖ 1 ರ ಸರ್ಕಾರದ ಆದೇಶದ ಷರತ್ತು ಸಂಖ್ಯೆ 4 ರನ್ವಯ ಬೆಳೆ ಸಾಲಗಳನ್ನು ಸಕಾಲಿಕವಾಗಿ ಮರುಪಾವತಿಸಿದ ರೈತರಿಗೆ ಕೇಂದ್ರ ಸರ್ಕಾರ ನಬಾರ್ಡ್ ಮುಖಾಂತರ ನೀಡುವ (ಶೇಕಡಾ 3ರಷ್ಟು) ಪ್ರೋತ್ಸಾಹಧನವನ್ನು ಈ ಯೋಜನೆಗೆ ಅಳವಡಿಸಿಕೊಂಡು ಸರ್ಕಾರ ಭರಿಸುವ ಬಡ್ಡಿ ಸಹಾಯಧನದ ದರವನ್ನು ನಿಗದಿಪಡಿಸಿ ಉಲ್ಲೇಖ 2 ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ.

ಕೇಂದ್ರ ಸರ್ಕಾರದ ಶೇ.3.00 ರ ಪ್ರೋತ್ಸಾಹ ಧನ ಯೋಜನೆಯಡಿಯಲ್ಲಿ ಶೇ.7.00 ರ ಬಡ್ಡಿ ದರದಲ್ಲಿ ರೈತರು ಅವಧಿ ಪೂರ್ವ ಸಾಲ ಮರುಪಾವತಿಸಿದಲ್ಲಿ ಶೇ.3.00 ರ ಬಡ್ಡಿಯನ್ನು ಪ್ರೋತ್ಸಾಹಧನ ರೂಪದಲ್ಲಿ ರೈತರಿಗೆ ವಾಪಸ್ ನೀಡಲಾಗುವ ಯೋಜನೆ ಇರುತ್ತದೆ.

ರಾಜ್ಯ ಸರ್ಕಾರವು ನಬಾರ್ಡ್ ಸುತ್ತೋಲೆಯಂತೆ ನಿವ್ವಳ ಬಡ್ಡಿದರವನ್ನು ಪೂರ್ಣವಾಗಿ ಪಾವತಿಸುತ್ತಿರುವುದರಿಂದ ಅಂದರೆ, ರಾಜ್ಯ ಸರ್ಕಾರದ ಶೂನ್ಯ ಹಾಗೂ ಶೇ.1.00 ರ ಬಡ್ಡಿದರದಲ್ಲಿ ಸಾಲ ನೀಡುವ ಯೋಜನೆಯಡಿಯಲ್ಲಿ ರೈತರು ಅವಧಿ ಪೂರ್ವ ಸಾಲ ಮರುಪಾವತಿಸಿದರೆ ರೈತರಿಂದ ರೂ.2.00 ಲಕ್ಷದವರೆಗೆ ಯಾವುದೇ ಬಡ್ಡಿಯನ್ನು ವಸೂಲು ಮಾಡಲಾಗುತ್ತಿಲ್ಲ ಹಾಗೂ ರೂ.2.00 ಲಕ್ಷದಿಂದ ರೂ.3.00 ಲಕ್ಷದವರೆಗಿನ ಸಾಲಗಳಿಗೆ ಶೇ1.00 ರ ಬಡ್ಡಿ ದರದಲ್ಲಿ ಮಾತ್ರ ಸಾಲ ವಸೂಲು ಮಾಡುತ್ತಿರುವುದರಿಂದ, ಕೇಂದ್ರ ಸರ್ಕಾರ ನೀಡುವ ಪ್ರೋತ್ಸಾಹಧನವನ್ನು ರಾಜ್ಯ ಸರ್ಕಾರ ನೀಡುವ ಬಡ್ಡಿ ಸಹಾಯಧನದೊಂದಿಗೆ ಹೊಂದಾಣಿಕೆ ಮಾಡಲು ಬಡ್ಡಿ ಸಹಾಯಧನದ ಕ್ಲೇಂ ಬಿಲ್ಲುಗಳ ನಮೂನೆಗಳನ್ನು ತಯಾರಿಸುವ ಅವಶ್ಯಕತೆ ಇರುತ್ತದೆ ಹಾಗೂ ಕೇಂದ್ರ ಸರ್ಕಾರದ ಶೇ.3.00 ರ ಪ್ರೋತ್ಸಾಹಧನವನ್ನು ಕ್ಲೇಂ ಮಾಡುವ ಮೊದಲು ರೈತರ ಖಾತೆಗೆ ಈ ಮೊತ್ತವನ್ನು ಜಮಾ ನೀಡುವುದನ್ನು ತಡೆಹಿಡಿಯಬೇಕಾಗುತ್ತದೆ. ರಾಜ್ಯ ಸರ್ಕಾರದ ಬಡ್ಡಿ ಸಹಾಯಧನ ಸೌಲಭ್ಯದಡಿಗೆ ಬರದ ಅಂದರೆ ರೂ.3.00 ಲಕ್ಕಕ್ಕಿಂತ ಹೆಚ್ಚಿಗೆ ಸಾಲ ಪಡೆದ ರೈತರಿಗೆ ನಬಾರ್ಡ್ ವತಿಯಿಂದ ಶೇ.3.00 ರ ಧನ ಸಹಾಯಕ್ಕೆ ಅರ್ಹ ರೈತರಿಗೆ ಯಾವ ರೀತಿ ಪಾವತಿಸುವುದು ಎಂಬುದಕ್ಕೆ ಪ್ರತ್ಯೇಕ ಸುತ್ತೋಲೆಯನ್ನು ಹೊರಡಿಸಲಾಗುವುದು.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, 2013-14 ನೇ ಸಾಲಿನಲ್ಲಿ ರೂ.2.00 ಲಕ್ಷದವರೆಗೆ ಶೂನ್ಯ ಬಡ್ಡಿದರ ಹಾಗೂ ರೂ.2.00 ಲಕ್ಷದಿಂದ ರೂ.3.00 ಲಕ್ಷದವರೆಗೆ ಶೇ.1.00 ರ ಬಡ್ಡಿ ದರದಲ್ಲಿ ವಿತರಿಸಿದ ಅಲ್ಪಾವಧಿ ಬೆಳೆ ಸಾಲಗಳಿಗೆ ಕೇಂದ್ರ ಸರ್ಕಾರ ಸಕಾಲದಲ್ಲಿ ಮರುಪಾವತಿಸಿದ ರೈತರಿಗೆ ನೀಡುವ ಶೇ.3.00 ರ ಪ್ರೋತ್ಸಾಹ ಧನವನ್ನು ರಾಜ್ಯ ಸರ್ಕಾರ ಪಡೆದು ಸರ್ಕಾರವು ನೇರವಾಗಿ ಪಾವತಿಸಬೇಕಾದ ಬಡ್ಡಿ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು. ಅದರಂತೆ ಅನುಕೂಲವಾಗುವಂತೆ ಬಿಲ್ಲುಗಳನ್ನು ತಯಾರಿಸಲು ನಮೂನೆಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ.